ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಜುಲೈ 13, 2020**

# ಪತ್ರಿಕಾ ಆಮಂತ್ರಣ

# ಪತ್ರಿಕಾ ಪ್ರಕಟಣೆ

## ಕೋವಿಡ್-19 ಸಹಾಯವಾಣಿ ಸ್ಥಾಪನೆ

¨ÉAUÀ¼ÀÆgÀÄ, dÄ¯ÉÊ 13 (PÀ£ÁðlPÀ ªÁvÉð): ಬೊಮ್ಮನಹಳ್ಳಿ ವಲಯದ ನಾಗರೀಕರಿಗೆ ಕೋವಿಡ್-19 ಸಂಬಂಧಿಸಿದಂತೆ ಮಾಹಿತಿ ಪಡೆಯಲು 24X7 ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ. ಸಾರ್ವಜನಿಕರು ವಾಟ್ಸಅಪ್ ಟೆಲಿಗ್ರಾಂ ಸಂಖ್ಯೆ : 9777777684 ಮತ್ತು ದೂರವಾಣಿ ಸಂಖ್ಯೆ : 080-45451111 ಮೂಲಕ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ. ಅಲ್ಲದೆ ಟ್ವಿಟ್ಟರ್ ಖಾತೆ @ Bommanahalli BBMP ನಲ್ಲಿಯೂ ಸಹ ಅಹವಾಲುಗಳನ್ನು ಕಳುಹಿಸಬಹುದು.

ವೈದ್ಯಕೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ ಸಂಖ್ಯೆ : 104 ಮತ್ತು 14400 ಗಳಿಗೆ ಕರೆ ಮಾಡಬಹುದಾಗಿದೆ. ಬೊಮ್ಮನಹಳ್ಳಿ ವ್ಯಾಪ್ತಿಗೆ ಹೆಚ್.ಎಸ್.ಆರ್ ಲೇಔಟ್, ಬೊಮ್ಮನಹಳ್ಳಿ, ಜರಗನಹಳ್ಳಿ, ಪುಟ್ಟೇನಹಳ್ಳಿ, ಬಿಳೇಕಹಳ್ಳಿ, ಹೊಂಗಸಂದ್ರ, ಮಂಗಮ್ಮನಪಾಳ್ಯ, ಅರಕೆರೆ, ಉತ್ತರಹಳ್ಳಿ, ಯಲೇಚನಹಳ್ಳಿ, ಸಿಂಗಸಂದ್ರ, ಬೇಗೂರು, ಗೊಟ್ಟಿಗೆರೆ, ಕೋಣನಕುಂಟೆ, ಅಂಜನಾಪುರ ಹಾಗೂ ವಸಂತಪುರ ವಾರ್ಡ್ ಗಳು ಸೇರುತ್ತವೆ ಎಂದು ಪ್ರಕಟಣೆ ತಿಳಿಸಿದೆ.

## ಮಕ್ಕಳಿಗೆ ಉಚಿತ ದೂರವಾಣಿ ಸಮಾಲೋಚನೆ ನೀಡಲು ಟೋಲ್-ಫ್ರೀ ಪ್ರಾರಂಭ

¨ÉAUÀ¼ÀÆgÀÄ, dÄ¯ÉÊ 13 (PÀ£ÁðlPÀ ªÁvÉð): ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ಮಕ್ಕಳಿಗೆ ಉಚಿತ ದೂರವಾಣಿ ಸಮಾಲೋಚನೆ ನೀಡಲು ಟೋಲ್-ಫ್ರೀ ಸಂ: 180004252244 ನ್ನು ಪ್ರಾರಂಭಿಸಿದೆ.

ಉಚಿತ ಟೆಲಿ ಆಪ್ತಸಮಾಲೋಚನೆಗೆ ಅಗತ್ಯವಿರುವ ಮಾನವ ಸಂಪನ್ಮೂಲದ ಬಳಕೆಗೆ ಯೂನಿಸೆಫ್ ಹಣಕಾಸು ಸಹಾಯ ಮಾಡುತ್ತದೆ. ಕರ್ನಾಟಕದಲ್ಲಿ ಸಮಾಲೋಚನೆಗೆ ಅಗತ್ಯವಿರುವ ಎಲ್ಲಾ ಮಕ್ಕಳಿಗಾಗಿ ಉಚಿತ ಟೆಲಿ ಕೌನ್ಸಲಿಂಗ್ ಸೌಲಭ್ಯ ನೀಡಲು ಯೋಜಿಸಲಾಗಿದೆ.

ಆಪ್ತ ಸಮಾಲೋಚನೆ ಬಯಸುವ ಎಲ್ಲಾ ಮಕ್ಕಳು ಹಾಗೂ ಮಕ್ಕಳ ಪೋಷಕರು 180004252244 ಸಂಖ್ಯೆಗೆ ಕರೆ ಮಾಡುವ ಮೂಲಕ ಉಚಿತವಾಗಿ ಆಪ್ತ ಸಮಾಲೋಚನೆ ಸೌಲಭ್ಯ ಪಡೆಯಬಹುದಾಗಿದೆ.

ಈ ಸೌಲಭ್ಯದಲ್ಲಿ ಪ್ರಮುಖವಾಗಿ ಎರಡು ಸಿಬ್ಬಂದಿಗಳನ್ನು ಹೊಂದಿದ್ದು, ಬೆಳಿಗ್ಗೆ 8 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಾಗೂ ಮಧ್ಯಾಹ್ನ 2 ರಿಂದ ರಾತ್ರಿ 8 ಗಂಟೆಯವರೆಗೆ ಪಾಳಿ ಕೆಲಸ ನಿರ್ವಹಿಸುತ್ತಾರೆ. ಇವರು ಮಗುವಿನ ಕರೆಗಳನ್ನು ಸ್ವೀಕರಿಸಿ ಮಗುವಿನ ನಿರ್ಧಿಷ್ಟವಾದ ಸಮಾಲೋಚನೆಯ ಅವಶ್ಯಕತೆಯನ್ನು ಆಧರಿಸಿ ಸಂಬಂಧಪಟ್ಟ ಸಮಾಲೋಚಕರಿಗೆ ಸಂಪರ್ಕ ಕಲ್ಪಿಸುತ್ತಾರೆ.

ಟೋಲ್-ಫ್ರೀ ಸಂಖ್ಯೆಗೆ ಬಂದ ಕರೆಗಳಿಗೆ ಅವಶ್ಯಕ ಆಪ್ತ ಸಮಾಲೋಚನೆ ಒದಗಿಸಲು ರಾಜ್ಯಾದ್ಯಂತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಲ್ಲಿ ಕಾನಿರ್ವಹಿಸುತ್ತಿರುವ 148 ಸಮಾಲೋಚಕರಿಗೆ ಹಾಗೂ ಸಮಾಜ ಕಾರ್ಯಕರ್ತರಿಗೆ ಪ್ರಥಮ ಹಂತದ ತರಬೇತಿಯ್ನು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಅನುಭವದ ಆಧಾರದ ಮೇಲೆ ಮನೋಶಾಸ್ತ್ರ ಬೆಂಬಲದ ಅವಶ್ಯಕತೆ ಇರುವ ಮಕ್ಕಳಿಗೆ ಸೇವೆ ಸಲ್ಲಿಸಲು ಅಗತ್ಯವಿರುವ ಹೆಚ್ಚಿನ ತರಬೇತಿಯನ್ನು ಸಮಾಲೋಚಕರಿಗೆ ನೀಡಲಾಗುವುದು.

ಇದರ ಸದುಪಯೋಗವನ್ನು ಮಕ್ಕಳು ಹಾಗೂ ಮಕ್ಕಳ ಪೋಷಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಚಿವರ ಪ್ರವಾಸ

¨ÉAUÀ¼ÀÆgÀÄ, dÄ¯ÉÊ 13 (PÀ£ÁðlPÀ ªÁvÉð): ವಸತಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಜುಲೈ 14 ರಂದು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಬೆಂಗಳೂರಿಗೆ ಹಿಂದಿರುಗುವರು ಎಂದು ಪ್ರಕಟಣೆ ತಿಳಿಸಿದೆ.

## ಎಸ್.ಎಂ.ಇ. ಕೈಗಾರಿಕೆಗಳಿಗೆ ಒಂದು ಪಾಳಿಯಲ್ಲಿ ಕಾರ್ಯ ನಿರ್ವಹಿಸುವಂತೆ ಸಹಾಯ ಮಾಡಲು

## ಸರ್ಕಾರಕ್ಕೆ ಕಾಸಿಯಾ ಅಧ್ಯಕ್ಷರ ಮನವಿ

ಬೆಂಗಳೂರು, ಜುಲೈ 13 (ಕರ್ನಾಟಕ ವಾರ್ತೆ):

ಜುಲೈ ೧೪ ರಿಂದ ೨೨ ರವರೆಗೆ ಬೆಂಗಳೂರಿನಲ್ಲಿ ಘೋಷಿಸಲಾಗಿರುವ ಲಾಕ್‌ಡೌನ್‌ನಿಂದಾಗಿ, ಈ ಹಿಂದಿನ ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳುತ್ತಿರುವ ಉದ್ಯಮದ ಮೇಲೆ ನಿರ್ದಿಷ್ಟವಾಗಿ ಎಂ.ಎಸ್.ಎಂ.ಇ.ಗಳ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಕಾಸಿಯಾ ತೀವ್ರ ಕಳವಳ ವ್ಯಕ್ತಪಡಿಸುತ್ತದೆ ಎಂದು ಕಾಸಿಯಾ ಅಧ್ಯಕ್ಷರಾದ ಕೆ.ಬಿ. ಅರಸಪ್ಪ ಅವರು ತಿಳಿಸಿದ್ದಾರೆ.

ಸಾಂಕ್ರಾಮಿಕ ರೋಗವನ್ನು ಒಟ್ಟಾಗಿ ನಿಯಂತ್ರಿಸಲು ನಾವೆಲ್ಲರೂ ಹೆಚ್ಚಿನ ಪ್ರಯತ್ನ ಮಾಡುತ್ತಿರವಾಗ, ಅಗತ್ಯವಾದ ಲಾಜಿಸ್ಟಿಕ್ ಸೇವೆಯನ್ನು ಖಾತ್ರಿಪಡಿಸಿಕೊಳ್ಳುವ ಮೂಲಕ ಎಸ್.ಎಂ.ಇ. ಕೈಗಾರಿಕೆಗಳಿಗೆ ಒಂದು ಪಾಳಿಯಲ್ಲಿ ಕಾರ್ಯಾ ನಿರ್ವಹಿಸುವಂತೆ ಸಹಾಯ ಮಾಡಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡಲು ಸರ್ಕಾರಕ್ಕೆ ನಮ್ಮ ಮನವಿ ಮಾಡಿದ್ದಾರೆ.

ನಗರದಲ್ಲಿ ತೀವ್ರವಾಗಿ ಉಲ್ಬಣಗೊಳ್ಳುತ್ತಿರುವ ಕೋವಿಡ್ ಸಾಂಕ್ರಾಮಿಕ ರೋಗವನ್ನು ನಿಭಾಯಿಸಲು ಸರ್ಕಾರವು ಕಠಿಣ ಮತ್ತು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದು ಖಂಡಿತವಾಗಿಯೂ ಅಗತ್ಯವಿದ್ದರೂ, ಸಂಪೂರ್ಣವಾಗಿ ತೊಂದರೆಗೊಳಗಾದ ಸಣ್ಣ ಕೈಗಾರಿಕಾ ವಲಯದ ಮೇಲೆ ಇವೆಲ್ಲವುಗಳ ಅನಿವಾರ್ಯ ಪರಿಣಾಮಗಳು ನಮ್ಮನ್ನು ಚಿಂತೆಗೀಡು ಮಾಡುತ್ತಿದೆ ಮತ್ತು ಇದರ ಪರಿಣಾಮವಾಗಿ ಎಸ್.ಎಂ.ಇ. ವಲಯವು ಸಂಪೂರ್ಣವಾಗಿ ಸಂಕಷ್ಟಕ್ಕೀಡಾಗಬಹುದು.

ನಾವು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿರುವಂತೆ, ಹಿಂದಿನ ಲಾಕ್‌ಡೌನ್ ಕಾರಣದಿಂದಾಗಿ ಅಂದಾಜು ಶೇಕಡಾ ೨೦ ರಷ್ಟು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಈಗಾಗಲೇ ರಾಜ್ಯದಲ್ಲಿ ಮುಚ್ಚಲ್ಪಟ್ಟಿವೆ ಮತ್ತು ಈಗ ಮತ್ತೆ ಒಂದು ವಾರ ಲಾಕ್‌ಡೌನ್ ಹೇರಲಿರುವ ಸರ್ಕಾರದ ನಿರ್ಧಾರವು, ಇದರ ಪರಿಣಾಮಗಳನ್ನು ಕೈಗಾರಿಕೆಗಳು ತಡೆದುಕೊಳ್ಳುವ ಸ್ಥಿತಿಯಲ್ಲಿ ಇರದ ಕಾರಣ ಹೆಚ್ಚಿನ ಸಂಖ್ಯೆಯ ಕೈಗಾರಿಕೆಗಳು ತಮ್ಮ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಲಿವೆ. ಎಂ.ಎಸ್.ಎಂ.ಇ.ಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡರೆ, ಬೆಂಗಳೂರಿನಲ್ಲಿ ಸುಮಾರು ೨,೪೦,೦೦೦ ನೋಂದಾಯಿತ ಘಟಕಗಳಿದ್ದು, ಇವುಗಳು ೨೫ ಲಕ್ಷ ಉದ್ಯೋಗ ಕಲ್ಪಿಸಿದ್ದು ಸುಮಾರು ೪೦,೦೦೦ ಕೋಟಿ ರೂ.ಗಳ ಬಂಡವಾಳ ಹೂಡಿಕೆಯನ್ನು ಮಾಡಿವೆ. ಇದು ಅಸಂಘಟಿತ ವಲಯವನ್ನು ಹೊರತುಪಡಿಸುತ್ತದೆ. ಆದ್ದರಿಂದ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮವು ಹಾನಿಕಾರಕವಾಗಿರುತ್ತದೆ.

ಸಣ್ಣ ಉದ್ಯಮಗಳನ್ನು ಎಲ್ಲಾ ಋಣಾತ್ಮಕ ಫಲಿತಾಂಶಗಳು ನಿರುತ್ಸಾಹಗೊಳಿಸಿರುವುದರಿಂದ ಉದ್ಯಮಗಳು ಎಂದಿಗೂ ಚೇತರಿಸಿಕೊಳ್ಳುವುದಿಲ್ಲವಾದರೂ, ಕಾರ್ಮಿಕರ ಮತ್ತು ಉದ್ಯೋಗಗಳ ಮೇಲಿನ ಪರಿಣಾಮವು ಅತ್ಯಂತ ಹಾನಿಕಾರಕವಾಗಿರುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಯಾವುದೇ ಉದ್ಯಮಿಗಳಿಗೆ ಕಾರ್ಮಿಕರ ವೇತನವನ್ನು ಪಾವತಿಸಲು ಸಾಧ್ಯವಾಗುವುದಿಲ್ಲ ಮತ್ತು ಸಾಮಾನ್ಯ ಸ್ಥಿತಿಗೆ ಮರಳಿದಾಗ ಕಾರ್ಮಿಕರನ್ನ ಪುನಃ ನೇಮಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಸಾಂಕ್ರಮಿಕ ರೋಗದ ವಿರುದ್ಧದ ಹೋರಾಟದಲ್ಲಿ ನಾವು ಸರ್ಕಾರದೊಂದಿಗೆ ಕೈಜೋಡಿಸಿದ್ದರೂ, ಅಗತ್ಯ ಶಿಷ್ಟಾಚಾರಗಳನ್ನು ಅನುಸರಿಸಿ ಚಾಲ್ತಿಯಲ್ಲಿರುವ ಪರಿಸ್ಥಿತಿಯಲ್ಲಿ ಉದ್ಯಮವು ಕನಿಷ್ಠ ಒಂದು ಪಾಳಿಯಲ್ಲಾದರೂ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡುವ ಸಂಭವನೀಯ ಮಾರ್ಗಗಳನ್ನು ಗಂಭೀರವಾಗಿ ಪರಿಗಣಿಸುವಂತೆ ನಾವು ಗೌರವಾನ್ವಿತ ಮುಖ್ಯ ಮಂತ್ರಿಗಳನ್ನು ಒತ್ತಾಹಿಸಲು ಬಯಸುತ್ತೇವೆ. ಅಗತ್ಯ ಸರಬರಾಜುಗಳ ನಿರ್ವಹಣೆಗಿಂತ ಉದ್ಯಮಗಳು ಅದರಲ್ಲೂ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಕಾರ್ಯಚಟುವಟಿಕೆಗಳನ್ನು ನಡೆಸುವುದನ್ನು ಖಾತರಿಪಡಿಸಿಕೊಳ್ಳುವುದು ರಾಜ್ಯ ಮತ್ತು ಆರ್ಥಿಕತೆಯ ಹಿತದೃಷ್ಟಿಯಿಂದ ಕಡಿಮೆ ಪ್ರಾಮುಖ್ಯತೆ ಹೊಂದಿಲ್ಲ ಎಂದು ನಾವು ನಂಬುತ್ತೇವೆ. ರಾಜ್ಯದ ಒಂದು ತಿಂಗಳ ಸುಮಾರು ೧೦,೦೦೦ ಕೋಟಿ ರೂ.ಗಳ ಆದಾಯದಲ್ಲಿ ಬೆಂಗಳೂರು ಮಹಾನಗರ ಶೇಕಡಾ ೭೦ ರಷ್ಟು ಪ್ರಮುಖ ಕೊಡುಗೆಯನ್ನು ನೀಡುತ್ತಿದೆ. ಇದರಿಂದ ಒಂದು ವಾರದ ಕಾಲ ಮಹಾನಗರ ಲಾಕ್‌ಡೌನ್ ಆದರೆ ರಾಜ್ಯದ ಬೊಕ್ಕಸಕ್ಕೆ ಆಗುವ ನಷ್ಟವನ್ನು ಅಂದಾಜು ಮಾಡುವುದು ಕಷ್ಟಸಾಧ್ಯವಲ್ಲ.

ಚುನಾಯಿತ ಪ್ರತಿನಿಧಿಗಳು ಮತ್ತು ಉತ್ತಮವಾಗಿ ಸಜ್ಜುಗೊಂಡಿರುವ ಸ್ಥಳೀಯ ಸರ್ಕಾರಿ ಯಂತ್ರೋಪಕರಣಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ರೋಗದ ಹರಡುವಿಕೆಯನ್ನು ತಡೆಗಟ್ಟಲು, ನಗರದ ವಾರ್ಡ್ಗಳ ಮಟ್ಟದಲ್ಲಿ ತೀಕ್ಷ್ಣವಾದ ಗಮನವನ್ನು ಹರಿಸುವ ಅವಶ್ಯಕತೆಯಿದೆ ಎಂದು ಸರ್ಕಾರದ ಗಮನಕ್ಕೆ ತರಬಯಸುತ್ತೇವೆ.

ಕಾರ್ಮಿಕರ ಜೀವನೋಪಾಯ ಮತ್ತು ಉತ್ಪಾದಕ ಕ್ಷೇತ್ರಗಳ ಮೇಲೆ ಬೀರಲಿರುವ ಪರಿಣಾಮಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಗೌರವಾನ್ವಿತ ಮುಖ್ಯ ಮಂತ್ರಿಗಳಲ್ಲಿ ಕಾಸಿಯಾ ತೀವ್ರವಾಗಿ ಮನವಿ ಮಾಡುತ್ತದೆ.

ಪ್ರತಿಯೊಬ್ಬರ ಹಿತಾಸಕ್ತಿಯಿಂದ ಹರಡುವಿಕೆಯನ್ನು ತಡೆಯಲು ಒಳಗೊಂಡಿರುವ ಅಗತ್ಯಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದರೂ, ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಚೆನ್ನಾಗಿ ಯೋಚಿಸಬೇಕು ಮತ್ತು ಅವು ಸಮರ್ಥನೀಯವಾಗಿರಬೇಕು.

## Industry function atleast on a single shift- KASSIA

Bengaluru, July 13 (Karnataka Information): KASSIA is deeply concerned about the likely consequences of the scheduled lockdown of Bangalore from 14th-22nd of July on industry, in particular the MSMEs, which have barely recovered from the earlier closure on account of the covid crisis.

While it is certainly necessary for the government to take hard and effective measures to tackle the worsening pandemic in the city, what worries us is the inevitable consequences of all this on the wholly beleaguered small industry sector which may end up completely shattered as a result.

As we have already conveyed to the govt, close to an estimated 20%  SMEs have shut in the state due to the earlier lockdown and the decision now to reimpose closure again for a week will further drive a large number of units out of business as they will hardly be in a position to sustain the impact anymore. Taking MSMEs alone, Bangalore has nearly 2,40,000 registered units with an employment of 25 lakhs and investment in the range of Rs. 40,000 crores. This is excluding the unorganized sector which close to the organised numbers. The economic and social impact will, therefore, be disastrous.

While enterprises will bleed never to recover disempowering the small entrepreneur with all likely negative outcomes, the effect on labour and jobs will be extremely harmful.

No entrepreneur will be able to pay wages under the circumstances and tens of thousands of workers may never be reemployed, when normalcy returns.

While we are with the govt in the fight against the pandemic, we nevertheless would like to urge the Hon'ble Chief Minister to seriously consider possible ways to allow industry to operate at least a single shift in the prevailing situation following the necessary protocols. We believe that ensuring industry, particularly MSMEs, to function is no less vital in the best interest of the state and the economy, than maintenance of essential supplies. It was roughly estimated earlier that a month's lockdown cost the state Rs. 10,000 crores in revenue and Bangalore being the major source of up to 70% of these revenues, it is not hard to estimate the loss from one week of closure of the metropolis to the exchequer.

It is also to be pointed out that there is need to bring a sharper focus on the wards in the city to contain the spread of the disease by more effectively using the elected representatives and the local govt machinery in everyone's interest.

KASSIA, would fervently appeal to the Hon'ble chief minister and the govt to seriously weigh the consequences of the measure employed on livlihoods of the vulnerable and the impact on productive sectors.

While we completely understand the need to contain the spread in everyone's interest, the measures must be well thought of and sustainable.

Our earnest appeal to the govt is to make all possible efforts to help industry function atleast on a single shift, by ensuring necessary logistics in the larger interest while all of us do our utmost to control the pandemic collectively.

## ಕೋವಿಡ್ 19 ರ ಸಂದರ್ಭದಲ್ಲಿ ಮಾಹಿತಿ ಹಕ್ಕಿನ ಪಾತ್ರ ಮಹತ್ವ: ಪ್ರೊ.ಕೆ.ಆರ್. ವೇಣುಗೋಪಾಲ್

**ಬೆಂಗಳೂರು, ಜುಲೈ 13 (ಕರ್ನಾಟಕ ವಾರ್ತೆ):** ಕೋವಿಡ್ 19 ರ ಸಂದರ್ಭದಲ್ಲಿ ಮಾಹಿತಿ ಹಕ್ಕಿನ ಪಾತ್ರ ಮಹತ್ವವಾದುದು. ಪಾರದರ್ಶಕತೆ ಮುಕ್ತತೆ ಹಾಗೂ ಹೊಣೆಗಾರಿಕೆ ಮಾಹಿತಿ ಹಕ್ಕು ಕಾಯ್ದೆಯ ತ್ರಿಮೂರ್ತಿಗಳಿದ್ದಂತೆ ಎಂದು ಪ್ರೊಫೆಸರ್ ಕೆ.ಆರ್ ವೇಣುಗೋಪಾಲ್ ತಿಳಿಸಿದರು.

ಅವರು ಇಂದು ರಾಷ್ಟ್ರೀಯ ಸೇವಾ ಯೋಜನೆ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಶಾಂತಿನಿಕೇತನ ಕಾಲೇಜಿನ ಸಹಯೋಗದಲ್ಲಿ ನಡೆಸಿದ ರಾಷ್ಟ್ರಮಟ್ಟದ ಒಂದು ದಿನದ ಕಾರ್ಯಕ್ರಮವಾದ ಕೋವಿಡ್ 19 ರ ಸಂದರ್ಭದಲ್ಲಿ ಮಾಹಿತಿ ಹಕ್ಕಿನ ಪ್ರಾಮುಖ್ಯತೆ ಎಂಬ ವಿಚಾರ ಸಂಕಿರಣ ಕಾಯ್ಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಭಾರತ ಸರ್ಕಾರ ಹಾಗೂ ಆಯಾಯ ರಾಜ್ಯದ ರಾಜ್ಯ ಸರ್ಕಾರಗಳು ನೀಡುವ ಸೌಲಭ್ಯ ಹಾಗೂ ಸವಲತ್ತುಗಳನ್ನು ತಿಳಿದುಕೊಳ್ಳಲು ಮಾಹಿತಿ ಹಕ್ಕು ಬಹಳ ಅನುಕೂಲಕರವಾಗಿದೆ. ಈ ಕರೋನ ವೈರಸ್ ಸಂದರ್ಭದಲ್ಲಿ ಪ್ರತಿಯೊಬ್ಬ ಸಾರ್ವಜನಿಕರು ಆರೋಗ್ಯ , ಆಹಾರದ ವ್ಯವಸ್ಥೆ ಹಾಗೂ ಅವರ ಮೂಲಭೂತ ಅವಶ್ಯಕ ವಸ್ತುಗಳ ಬಗ್ಗೆ ತಿಳಿಯಲು ಮಾಹಿತಿ ಹಕ್ಕು ಬಹಳ ಅವಶ್ಯವಾಗಿದೆ ಎಂದರು.

ಮಾಹಿತಿ ಹಕ್ಕು ಕಾಯ್ದೆಯನ್ನು ಭಾರತ ಸಂಸತ್ತು 2005ರಲ್ಲಿ ರೂಪಿಸಿ, ಇವತ್ತಿಗೆ 15 ವರ್ಷಗಳು ಆಗಿದ್ದು, ಪ್ರಜಾಪ್ರಭುತ್ವ ಆಶಯ ಹಾಗೂ ಮೌಲ್ಯಗಳನ್ನು ಎತ್ತಿ ಹಿಡಿಯಲು ಈ ಕಾಯ್ದೆಯ ಬಹಳ ಅವಶ್ಯವಾದ ಕಾನೂನಾಗಿದೆ ಎಂದು ಕರ್ನಾಟಕ ರಾಜ್ಯದ ಮಾಹಿತಿ ಆಯೋಗದ ಮುಖ್ಯ ಅಧ್ಯಕ್ಷರಾದ ಎನ್.ಸಿ ಶ್ರೀನಿವಾಸ್ ತಿಳಿಸಿದರು.

ಪ್ರಪಂಚದಲ್ಲಿಯೇ ಸ್ವೀಡನ್ ಮಾಹಿತಿ ಕಾಯ್ದೆಯನ್ನು ರಚಿಸಿದ ಮೊದಲ ದೇಶವಾಗಿದ್ದು , ಪ್ರಪಂಚದ ಅತ್ಯುತ್ತಮ ಮಾಹಿತಿ ಕಾಯ್ದೆಗಳಲ್ಲಿ ಭಾರತ ಮೂರನೇ ಸ್ಥಾನವನ್ನು ಪಡೆದಿದ್ದು, ಅನುಷ್ಠಾನ ವಿಚಾರದಲ್ಲಿ 66ನೇ ಸ್ಥಾನವನ್ನು ಪಡೆದಿದೆ. ಸರ್ಕಾರಗಳ ಯೋಜನೆಗಳು ಹಾಗೂ ಪಾಲಿಸಿಗಳನ್ನು ನಾಗರಿಕರು ಮಾಹಿತಿ ಹಕ್ಕಿನ ಮೂಲಕ ತಿಳಿದುಕೊಳ್ಳಬಹುದು. ಈ ಮಾಹಿತಿ ಹಕ್ಕು ಕಾಯ್ದೆ ವಸ್ತು ವಿಷಯವನ್ನು ಎಲ್ಲಾ ಪದವಿ ಕಾಲೇಜುಗಳಲ್ಲಿ ಅಭ್ಯಸಿಸಿದರೆ, ಹೆಚ್ಚೆಚ್ಚು ಮಟ್ಟದಲ್ಲಿ ಪ್ರಜಾಪ್ರಭುತ್ವದಲ್ಲಿ ಭಾಗವಹಿಸಬಹುದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರೊಫೆಸರ್ ಸಿ. ಬಸವರಾಜು, ಕಾನೂನು ಶಾಲೆ ಮೈಸೂರು ವಿಶ್ವವಿದ್ಯಾಲಯ ನಿರ್ದೇಶಕರು ಹಾಗೂ ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಯೋಜನಾಧಿಕಾರಿಗಳಾದ ಡಾ. ಎನ್ ಸತೀಶ್ ಗೌಡ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಚಿತ್ರದಲ್ಲಿ:

ಬೆಂಗಳೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿ ಗಳಾದ ಕೆಆರ್ ವೇಣುಗೋಪಾಲ್ ರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯದ ಮಾಹಿತಿ ಆಯೋಗದ ಮುಖ್ಯ ಅಧ್ಯಕ್ಷರಾದ ಶ್ರೀ ಎಂ ಶ್ರೀನಿವಾಸ್ ರವರು ಹಾಗೂ ಗೌರವ ಅತಿಥಿಗಳಾಗಿ ಪ್ರೊಫೆಸರ್ ಸಿ. ಬಸವರಾಜು ನಿರ್ದೇಶಕರು, ಕಾನೂನು ಶಾಲೆ ಮೈಸೂರು ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯದ ಎನ್ಎಸ್ಎಸ್ ಯೋಜನಾಧಿಕಾರಿಗಳಾದ ಡಾ. ಎನ್ ಸತೀಶ್ ಗೌಡ, ರವರು ಉಪಸ್ಥಿತರಿದ್ದರು

**ಅಪಾರ್ಟ್ಮೆಂಟ್ ಮಾಲಿಕರ ಸಂಘಕ್ಕೆ ಹಾಗೂ ನಿವಾಸಿ ಕಲ್ಯಾಣ ಸಂಘಕ್ಕೆ ಕೆಲವು ಮಾರ್ಗಸೂಚಿಗಳು**

ಬೆಂಗಳೂರು, ಜುಲೈ 13 (ಕರ್ನಾಟಕ ವಾರ್ತೆ): ಇತ್ತೀಚಿನ ದಿನಗಳಲ್ಲಿ ಪ್ರಾಣಿಗಳನ್ನು ಸಾಕುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಪ್ರಾಣಿ ಪ್ರಿಯರ ಮತ್ತು ಅಪಾರ್ಟ್ಮೇಂಟ್ ನಿವಾಸಿಗಳ ಮಧ್ಯ ಸಂಘರ್ಷಗಳು ಹೆಚ್ಚಾಗುತ್ತಿವೆ. ಶಾಂತಿಯುತ ಮಾರ್ಗದಲ್ಲಿ ಸಮಸ್ಯೆಯನ್ನು ಪರಿಹರಿಸಲು ಪಶುಸಂಗೋಪನೆ ಇಲಾಖೆ ಪ್ರಾಣಿ ಪ್ರಿಯರಿಗೆ ಅಪಾರ್ಟ್ಮೇಂಟ್ ಮಾಲಿಕರ ಸಂಘಕ್ಕೆ ಹಾಗೂ ನಿವಾಸಿ ಕಲ್ಯಾಣ ಸಂಘಕ್ಕೆ ಕೆಲವು ಮಾರ್ಗಸೂಚಿಗಳನ್ನು ಪಶುಸಂಗೋಪನೆ ಇಲಾಖೆ ಹೊರಡಿಸಿದೆ.

ಭಾರತದ ಸಂವಿಧಾನದ ವಿಧಿ 15 (ಜಿ) ಪ್ರಕಾರ ಕಾಡುಗಳು, ಸರೋವರಗಳು, ನದಿಗಳು ಮತ್ತು ವನ್ಯ ಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಅಭಿವೃದ್ಧಿ ಪಡಿಸುವುದು ಮತ್ತು ಎಲ್ಲಾ ಜೀವಿಗಳ ಬಗ್ಗೆ ಸಹಾನುಭೂತಿ ಹೊಂದಿರುವುದು ಪ್ರತಿಯೊಬ್ಬ ನಾಗರಿಕರನ ಕರ್ತವ್ಯವಾಗಿದೆ.

**ಮಾರ್ಗಸೂಚಿಗಳು:**

ನಿವಾಸಿಗಳ ಕಲ್ಯಾಣ ಸಂಘ, ಮಾಲೀಕರ ಸಂಘ ಮತ್ತು ನಿವಾಸಿಗಳು ಸವಾನುಮತದಿಂದ ಅಥವಾ ಬಹುಮತದಿಂದ ಸಾಕು ನಾಯಿಗಳ / ಪ್ರಾಣಿಗಳ ಮೇಲೆ ಕಾನೂನಾತ್ಮಕ ನಿಷೇಧ ಹೇರಲು ಬರುವುದಿಲ್ಲ.

ಅಲ್ಲದೆ ನಾಯಿಗಳ ಗಾತ್ರದ ಮೇಲೆ ಸಾಕಲು ಅನುಮತಿಸುವುದು ಅಥವಾ ಅವು ಬೊಗಳುವುದನ್ನು ಗಮನದಲ್ಲಿಟ್ಟುಕೊಂಡು ನಿಷೇಧ ಹೇರಲು ಕಾರಣವೆಂದು ಪರಿಗಣಿಸಲು ಬರುವುದಿಲ್ಲ.

ಪ್ರಾಣಿಗಳನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂದು ಪರಿಗಣಿಸಿ ಬದುಕುವ ಅವಕಾಶ ಸಂವಿಧಾನದಲ್ಲಿದ್ದು, ಸಾಕು ಪ್ರಾಣಿಗಳ ಮಿತಿಯ ಮೇಲೆ ನಿರ್ಭಂದ ಹೇರಲು ಬರುವುದಿಲ್ಲ.

**ಸಾಕು ಪ್ರಾಣಿಗಳನ್ನು ಲಿಫ್ಟ್‌ನಲ್ಲಿ ಒಯ್ಯಲು ನಿರಾಕರಿಸುವಂತಿಲ್ಲ:**

ಸಾಕು ಪ್ರಾಣಿಗಳ ಸ್ವಚ್ಛತೆ ಬಗ್ಗೆ ಮಾಲೀಕರೆ ಹೆಚ್ಚು ಗಮನಕೊಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಸಾಕು ಪ್ರಾಣಿ ಮಾಲೀಕರಿಗೆ ದಂಡ ವಿಧಿಸುವಂತಿಲ್ಲ.

ಸಾಕು ಪ್ರಾಣಿಗಳನ್ನ ಬಿಟ್ಟು ಕೊಟಲು ಅಥವಾ ತ್ಯಜಿಸಲು ಅಪಾರ್ಟ್ಮೇಂಟ್ ಮಾಲೀಕರ ಸಂಘ ಹಾಗೂ ನಿವಾಸಿ ಕಲ್ಯಾಣ ಸಂಘಕ್ಕೆ ಒತ್ತಾಯಿಸುವಂತಿಲ್ಲ.

ಪ್ರಾಣಿಗಳ ಮೇಲೆ ಕ್ರೌರ್ಯ, ಗಾಯಗೊಳಿಸುವುದು, ಹೊಡೆಯುವುದು, ಉಪವಾಸವಿಡುವುದು, ವಿಶಪ್ರಾಶನ ಮಾಡಿಸುವುದು, ಅಕ್ರಮವಾಗಿ ಗೂಡಿನಲ್ಲಿ ಕೂಡಿಡುವುದು ಅಥವಾ ಕೊಲ್ಲುವುದು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವ ಸೆಕ್ಷನ್ 11ರ ಅಡಿಯಲ್ಲಿ ಮತ್ತು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 428 ಮತ್ತು 429ರ ಱ್ರಕಾರ ಕ್ರಿಮಿನಲ್ ಅಪರಾಧವಾಗಿದೆ.

ಬೀದಿ ಬದಿಯ ಪ್ರಾಣಿಗಳಿಗೆ ಆಹಾರ ನೀಡುವುದು ಸಾಮಾಜಿಕ ಸೇಯಾಗಿದ್ದು, ಆರೈಕೆ ಮಾಡುವವರಿಗೆ ಕಿರುಕುಳ ನೀಡುವುದು ಬೆದರಿಕೆ ಹಾಕುವುದು ಭಾರತೀಯ ಸಂವಿಧಾನದ 51 ಎ(ಜಿ) ವಿಧಿಗೆ ವಿರುದ್ದವಾಗಿರುತ್ತದೆ.

ಅಪಾರ್ಟ್ಮೇಂಟ್ ಮಾಲಿಕರ ಸಂಘ ಹಾಗೂ ನಿವಾಸಿ ಕಲ್ಯಾಣ ಸಂಘಗಳು ಪ್ರಾಣಿಗಳಿಗೆ ಆಹಾರ ನೀಡುವ ಸ್ವಾತಂತ್ರ್ಯಕ್ಕೆ ಅಡ್ಡಿ ಪಡಿಸುವಂತಿಲ್ಲ. ಬೀದಿ ಬದಿಯ ಬೆಕ್ಕು, ನಾಯಿ, ಪಕ್ಷಿಗಳನ್ನು ಇತರ ನಿವಾಸಿಗಳ ಮನೆಗಳಿಂದ ದೂರದಲ್ಲಿ ಆಹಾರ ನೀಡುವಂತೆ ತಿಳಿಸಬಹುದು.

ಅಪಾರ್ಟ್ಮೇಂಟ್ ಮಾಲಿಕರ ಸಂಘ ಹಾಗೂ ನಿವಾಸಿ ಕಲ್ಯಾಣ ಸಂಘಗಳು ಎನ್.ಜಿ.ಓಗಳನ್ನು ಸಂಪರ್ಕಿಸಿ ನಾಯಿಗಳ ಸಂತನಾ ಹರಣ ಶಸ್ತ್ರ ಚಿಕಿತ್ಸೆ ಲಸಿಕೆ ಹಾಕಿಸಿ ಆಯಾ ಪ್ರದೇಶಗಳಿಗೆ ಹಿಂದಿರುಗಿಸಬಹುದು. ಈ ಎಲ್ಲಾ ಅಂಶಗಳು ಬೀದಿ ಬದಿಯ ಪ್ರಾಣಿಗಳಿಗೂ ಅನ್ವಯವಾಗುತ್ತದೆ.

ಅಪಾರ್ಟ್ಮೆಂಟ್ ಮಾಲಿಕರ ಸಂಘ ಹಾಗೂ ನಿವಾಸಿ ಕಲ್ಯಾಣ ಸಂಘಗಳು ಬೀದಿ ಬದಿಯ ಪ್ರಾಣಿಗಳಿಗೆ ಆಹಾರ ನೀಡುವುದರ ಬಗ್ಗೆ ಪ್ರೋತ್ಸಾಯಿಸಬಹುದು ಹಾಗೂ ಪ್ರಾಣಿಗಳನ್ನು ಪ್ರೀತಿಯಿಂದ ನೋಡಿಕೊಳ್ಳಲು ಜಾಗೃತಿ ಮೂಡಿಸಬಹುದು.

ಸಮುದಾಯ ಮಟ್ಟದಲ್ಲಿ ಪ್ರಾಣಿಗಳನ್ನು ದತ್ತುಪಡೆಯಲು ಶಿಫಾರಸ್ಸು ಮಾಡಬಹುದು. ಬೀದಿ ಬದಿಯ ಪ್ರಾಣಿಗಳಿಗೆ ಆಹಾರ ನೀಡುವುದರ ವಿರುದ್ದ ಯಾವುದೇ ಕಾನೂನು ಇಲ್ಲ. ನಾಗರೀಕರು ತಾವು ವಾಸಿಸುವ ಸ್ಥಳ ಲೆಕ್ಕಿಸದೆ ತಮ್ಮ ಸಂಪನ್ಮೂಲದಲ್ಲಿ ಯಾವುದೇ ಪ್ರಾಣಿಗಳಿಗೆ ಆಹಾರ ನೀಡಬಹುದು.

ಅಪಾರ್ಟ್ಮೆಂಟ್ ಮಾಲಿಕರ ಸಂಘ ಹಾಗೂ ನಿವಾಸಿ ಕಲ್ಯಾಣ ಸಂಘಗಳು ಜೇನು ನೊಣಗಳು ಮುಂತಾದವುಬಳ ಬಗ್ಗೆ ಅಹಿಂಸಾ ಸಿದ್ದಾಂತವನ್ನು ಅಳವಡಿಸಿಕೊಳ್ಳಬೇಕು ಮತ್ತು ಅವುಗಳನ್ನು ಮಾನವೀಯತೆಯಿಂದ ನೋಡಿಕೊಳ್ಳಬೇಕು ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

## ಚಾಮುಂಡಿ ಹುಲಿ ದತ್ತು ಸ್ವೀಕಾರ

ಬೆಂಗಳೂರು, ಜುಲೈ 13 (ಕರ್ನಾಟಕ ವಾರ್ತೆ): ಹರೀಶ್‌ಗೌಡ ಜಿ.ಡಿ ರವರ ಮಗ ಮತ್ತು ಮಾಜಿ ಉನ್ನತ ಶಿಕ್ಷಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ವಿಧಾನ ಸಭಾ ಕ್ಷೇತ್ರದ ಸದಸ್ಯರಾಗಿರುವ ಜಿ.ಟಿ. ದೇವೇಗೌಡ ಇವರ ಮೊಮ್ಮಗ ಸಂವೇದ್‌ಗೌಡ ಜಿ.ಹೆಚ್. ರವರು ಅವರ ಹುಟ್ಟು ಹಬ್ಬದ ಪ್ರಯುಕ್ತ ಮೈಸೂರು ಮೃಗಾಲಯದ ಚಾಮುಂಡಿ ಹುಲಿಯನ್ನು ರೂ. 1,00,000/-ಗಳನ್ನು ಪಾವತಿಸಿ ದತ್ತು ಸ್ವೀಕಾರ ಮಾಡಿದ್ದಾರೆ. (ದತ್ತು ಸ್ವೀಕಾರದ ಅವಧಿ 12-07-2020 ರಿಂದ 11-07-2021)

ಮೈಸೂರು ಮೃಗಾಲಯದ ಮುಖ್ಯ ದ್ಯೇಯೋದ್ದೇಶವಾದ ಪ್ರಾಣಿ ಸಂರಕ್ಷಣೆಯಂತಹ ಒಂದು ಮಹತ್ಕಾರ್ಯದಲ್ಲಿ ತಮ್ಮ ಕೈಜೋಡಿಸುವ ಮೂಲಕ ಉನ್ನತ ಮಟ್ಟದ ಕೊಡುಗೆಯನ್ನು ನೀಡಿರುವ ಜಿ.ಟಿ.ದೇವೆಗೌಡ ಇವರ ಕುಟುಂಬದವರಿಗೆ ಶ್ರೀ ಚಾಮರಾಜೇಂದ್ರ ಮೃಗಾಲಯವು ವಂದಿಸಿದೆ. ಪ್ರಾಣಿಗಳ ಸಂರಕ್ಷಣೆಯ ಜಂಟೀ ಪ್ರಯತ್ನದ ಯೋಜನೆಗೆ ಇದೇ ರೀತಿಯ ಬೆಂಬಲ / ಸಹಕಾರವನ್ನು ಮುಂದುವರೆಸುವಂತೆ ಕೋರುತ್ತಾ, ಮೃಗಾಲಯ ಪ್ರಾಣಿಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಅವುಗಳ ಸಂರಕ್ಷಣೆಗೆ ವಿಶೇಷ ಒಲವಿನಿಂದ ತಮ್ಮ ಬೆಂಬಲವನ್ನು ನೀಡಲು ಕೋರಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.